ಅಲ್ಲದೆ ಪಾಪ ಪುಣ್ಯಗಳು, ಗುರುವಿನ ಮಹತ್ವ, ಯೋಗದ ರೀತಿ, ಆತ್ಮನಿರೀಕ್ಷೆ ಹಾಗೂ ನಿರ್ಮೋಹತ್ವಗಳನ್ನು ಕುರಿತು ಬಹಳ ಮಾರ್ಮಿಕವಾಗಿ ವೇಮನ ಬೋಧಿಸಿದ್ದಾನೆ. ಮಾನವನು ಅಲ್ಪ ಸುಖಕ್ಕೆ ಆಸೆ ಪಡದೆ ಪರಮಸುಖವನರಿತು ಬಾಳಲು ಅವನು ಕರೆಕೊಟ್ಟಿದ್ದಾನೆ. ನಮ್ಮ ಕರ್ಮಗಳಿಂದ ಪಾಪಪುಣ್ಯಗಳು ಉಂಟಾಗುತ್ತವೆ. ಹಾಗಾಗಿ ಮನಃಶುದ್ಧಿಯಿಂದ ಕೆಲಸ ಮಾಡ ಬೇಕೆಂಬುದು ಅವನ ಅಭಿಪ್ರಾಯವಾಗಿದೆ. ಮಾನವನು ಗುರು ವನ್ನು ಹೊಂದಿ, ಚಿತ್ತಶುದ್ಧಿಯಿಂದ ಭಕ್ತಿಯನ್ನು ಆಚರಿಸಿದಲ್ಲಿ ಮೋಕ್ಷಸುಖವನ್ನು ಪಡೆಯಬಹುದು ಎಂದವನು ಹೇಳುತ್ತಾನೆ.

ಹಾಗೆಯೇ ಜಾತಿಯನ್ನು ಕಲ್ಪಿಸುವ ಜನರ ಬಗ್ಗೆ ಬಹಳ ಎಚ್ಚರಿಕೆಯಿಂದಿರಲು ಈ ರೀತಿ ಕರೆಕೊಟ್ಟಿದ್ದಾನೆ:

**ಮರ್ಮವರಿಯದವರು ಮತಗಳ ಕಲ್ಪಿಸಿ**
**ಉರ್ವಿಯೊಳಗೆ ಜನರು ದುಃಖಿಸುವರು ।**
**ಬದುಕೊಂದು ನಾಯಿ ಬೊಗಳಿದ ತೆರದೊಳು**
**ವಿಶ್ವತೋಭಿರಾಮ ಕೇಳೋ ವೇಮಾ ॥**

ಸಜ್ಜನರ ಸಂಗ, ಅಹಿಂಸೆ ಹಾಗೂ ವೈರಾಗ್ಯಗಳನ್ನು ವೇಮನ ಹೀಗೆ ಬೋಧಿಸುತ್ತಾನೆ:

**ಮೆಣಸು ನೋಡೆ ಮೇಲೆ ಕಪ್ಪಗೆ ಕಾಣ್ಬುದು**
**ಕಡಿದುನೋಡಲೊಳಗೆ ಸಾರವಿಹುದು ।**
**ಸಜ್ಜನರ ಸಾರವೀತೆರದಿರ್ಕುಂ**
**ವಿಶ್ವತೋಭಿರಾಮ ಕೇಳೋ ವೇಮಾ ॥**

**ಹಾಲು ಕಲೆತ ನೀರು ಹಾಲಾಗಿ ಶೋಧಿಸಿ**
**ಪಾನಯೋಗ್ಯವಾದ ತೆರದೊಳದುವೆ ।**
**ಸಾಧುಜನರ ಕೂಡಿಯಾಡುವ ಮನುಜರು**
**ಮುಕ್ತರಹರು ಮಾನನೀಯ ವೇಮಾ ॥**

**ಆಸೆಯಿಂದ ನರನು ಜೀವನ ಪರ್ಯಂತ**
**ತಿರುಗುತಿಹನಾ ಭ್ರಮೆಯ ತಿರುಗಿಸದಲೆ ।**
**ಕೊಳಕು ಪಾತ್ರೆಯಲಿ ಒಣಗಳು ಮುತ್ತುವಂತೆ**
**ವಿಶ್ವತೋಭಿರಾಮ ಕೇಳೋ ವೇಮಾ ॥**

ವೇಮನನ ಅನೇಕ ಪದ್ಯಗಳು ಜೀವನಮೌಲ್ಯಗಳನ್ನು ಪ್ರತಿಪಾದಿಸುವ ವಚನಗಳಂತಿವೆ. ಸತ್ಯ, ಅಹಿಂಸೆ, ಉತ್ತಮರ ಸಹವಾಸ ಹಾಗೂ ಗುಣವಂತಿಕೆಗೆ ಬೆಲೆ ಕೊಡಬೇಕೆಂಬುದನ್ನು ಈ ಕೆಳಕಂಡ ಪದ್ಯಗಳಲ್ಲಿ ವೇಮನನು ಪ್ರತಿಪಾದಿಸಿದ್ದಾನೆ:

**ನಿಜವ ನುಡಿವವನು ನಿರ್ಮಲವಾಗಿರ್ಪ**
**ನಿಜವ ನುಡಿವವನೆ ನೀತಿಪರನು ।**
**ನಿಜವ ನುಡಿಯದವನೇ ನೀಚ ಚಾಂಡಾಲನು ವೇಮಾ ॥**

**ಶಿಲೆಯ ಬಸವಗೈದೆ ಶರಣೆಂದು ಮುಗಿವರು**
**ಜೀವವಿರುವ ಬಸವನನ್ನು ಗುದ್ದುತಿಹರು ।**
**ಬಸವನ ಭಕ್ತರು ಪಾಪಿಗಳಲ್ಲವೆ**
**ವಿಶ್ವತೋಭಿರಾಮ ಕೇಳೋ ವೇಮಾ ॥**

ಪ್ರತಿಯೊಬ್ಬ ವ್ಯಕ್ತಿಯೂ ಇತರರನ್ನು ಮಾನವರಂತೆ ಕಾಣ ಬೇಕೆಂದು ವೇಮನನ ಅಭಿಪ್ರಾಯ. ಜಾತಿಪದ್ಧತಿಯನ್ನು ಕಲ್ಪಿಸುವವರನ್ನು ನೀಚರೆಂದೂ, ಅವರಿಗೆ ಸಮಾಜದಲ್ಲಿ ಮನ್ನಣೆ ನೀಡಬಾರದೆಂದೂ ವೇಮನ ಹೇಳುತ್ತಾನೆ. ಉಚ್ಚ-ನೀಚ ಎಂದು ಭೇದ ಮಾಡುವವರನ್ನು ಮೂರ್ಖರೆಂದು ಜರಿದಿದ್ದಾನೆ.

**ಹೆಚ್ಚು ಕಡಿಮೆಯೆನುತ ಮನದೊಳು ಭಾವಿಸಿ**
**ಕುತ್ಸಿತವರಿಯದ ಮೂರ್ಖ ಜನರ ।**
**ಮತ್ಸರದಿಂದಲಿ ಚಾಂಡಾಲರೆಂಬರು**
**ವಿಶ್ವತೋಭಿರಾಮ ಕೇಳೋ ವೇಮಾ ॥**

**ನರಕುಲದೊಳು ತಾಂ ಜನಿಸಿಯೂ**
**ನರಕುಲದೊಳು ಬೆಳೆದು ನರನಾಗಿರುತಲೂ ತಾಂ ।**
**ಹರಕುಲದೊಳು ಚರಿಸಲಾಗಿ ಹರನಹನು**
**ವಿಶ್ವತೋಭಿರಾಮ ಕೇಳೋ ವೇಮಾ ॥**

ಹೀಗೆ ಅಲೌಕಿಕ ಹಾಗೂ ಲೌಕಿಕ ವಿಚಾರವನ್ನೊಳಗೊಂಡಂತೆ ಇನ್ನೂ ಅನೇಕ ಪದ್ಯಗಳಿವೆ. ವೇಮನ ತನ್ನ ಜೀವನಪರ್ಯಂತ ಶಿವಯೋಗಿಯಂತೆ ಕಾಯಕ ಮಾಡುತ್ತಾ ಬದುಕಿದನೆಂದು ಕಂಡುಬರುತ್ತದೆ. ಈತನ ಸಮಾಧಿಯು ಆಂಧ್ರಪ್ರದೇಶದ ಕಡಪಾ ಜಿಲ್ಲೆಯ ಕದರಿ ತಾಲೂಕಿನ ಕಠಾರಿ ಹಳ್ಳಿಯಲ್ಲಿದೆ.

## ಚಾರಿತ್ರ್ಯ

**ಎಲ್ಲಿ ತರುವುದು ಗುರುವೆ, ನಿನ್ನಂಥ ಅಪ್ಪಟ**
**ಬ್ರಹ್ಮಚಾರಿಯನು! "ಮಹಿಳೆಯರೆಲ್ಲ ಜಗದಂಬೆ-**
**ಯಂಶಗಳೆ, ಆದರೂ ಅವರಿಂದ ದೂರವಿರಿ!"**
**ಎಂದು ಉಪದೇಶಗೈದರು ನಿಮ್ಮ ಗುರುದೇವರು.**
**ಭೋಗಭೂಮಿ ಅಮೆರಿಕದಲ್ಲಿ ಎಂಥೆಂಥ**
**ಚೆಲುವೆಯರು, ಸಿರಿವಂತೆಯರು**
**ಸುತ್ತಿಮುತ್ತಿದರು ನಿಮ್ಮ!**
**ನಿರ್ವಾತ ಪ್ರದೀಪ ಪ್ರೋಜ್ವಲವಾಗಿ**
**ನಿಮ್ಮ ಮನವಿತ್ತು,**
**ಯೌವನದ ಭರದಲ್ಲಿ, ರೂಪದ ತೇಜದಲ್ಲಿ !**
**"ನಿಮ್ಮನು ಕೂಡಿ, ನಿಮ್ಮಂಥ ಮಗನೊಬ್ಬನನು**
**ಪಡೆಯಬಯಸುವೆನು!"**
**ಎಂದು ಕಾಮಿನಿಯೊಬ್ಬಳುದ್ಗರಿಸೆ,**
**ನೀವಿತ್ತ ಉತ್ತರವೊ ಲೋಕೋತ್ತರವೆ ದಿಟಕು:**
**"ಅಮ್ಮ, ಇದೊ ಮಗನಾಗುವೆನು ನಾನೆ!"**
**ಲೋಕದ ಚರಿತ್ರೆಯಲಿ ಈ ಪರಿಯ ಚಾರಿತ್ರ್ಯ**
**ಅಪರೂಪ; ಸಾಮಾನ್ಯ ಮಂದಿಗಂತೂ ವಿಚಿತ್ರ !**

**– ಡಾ. ಸಿ.ಪಿ.ಕೆ.**